ಹೇಳಿದ್ದಾರೆ. ಕೋರ್ಟಿನಲ್ಲಿರತಕ್ಕಂಥ ವಿಚಾರ ಬೇರೆ. ಅದನ್ನು ಶೀಘ್ರವಾಗಿ ತೆರೆವು ಮಾಡತಕ್ಕಂಥ ಪ್ರಯತ್ನ ಮಾಡೋಣ. ಮಾಲೀಕರು ಯಾರು ಇದ್ದಾರೆ ಅವರನ್ನು ಭೇಟಿ ಮಾಡಿ ಮಾತುಕತೆ ಮಾಡಿ ಎನ್ನುವ ಇನ್ನೊಂದು ಸಲಹೆ ಮಾಡಿದ್ದಾರೆ. ನಾನು ಮುಖ್ಯ ಮಂತ್ರಿಗಳಿಗೆ ಈ ವಿಷಯವನ್ನು ತಿಳಿಸುತ್ತೇನೆ. ನಾವು ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು : ಇಲ್ಲಿಗೆ ಪ್ರಶ್ನೋತ್ತರ ಅವಧಿ ಮುಗಿಯಿತು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಬೇಲೂರಿನಲ್ಲಿ ಮನೆಗಳ ನಿರ್ಮಾಣ ಕುರಿತು

192 - ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ (ಬೇಲೂರು) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ಗೃಹ ಮಂಡಳಿಯವರು ಬೇಲೂರಿನಲ್ಲಿ ಮನೆಗಳನ್ನು ಕಟ್ಟಿಸಿಕೊಡುವುದಾಗಿ ಸಾರ್ವಜನಿಕರಿಂದ ಹಣ ವಸೂಲು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ, ಯಾವ ವರ್ಷ ಠೇವಣಿ ಹಣವನ್ನು ವಸೂಲು ಮಾಡಲಾಯಿತು?*

ಇ) *ಈವರೆಗೆ ಮನೆ ಕಟ್ಟದಿರುವ ಕಾರಣಗಳೇನು? ಹಾಗೂ ಠೇವಣಿದಾರರಿಗೆ ಹಣಕ್ಕೆ ಬಡ್ಡಿ ಕೊಡಲಾಗುವುದೇ?*

ಈ) *ಮನೆಗಳನ್ನು ಕಟ್ಟಿಸಿಕೊಡಲು ಎಷ್ಟು ವರ್ಷಗಳು ಬೇಕಾಗುವುದು?*

ಶ್ರೀ ಗೋಪಿನಾಥ್ ಆರ್. ಸಾಂಡ್ರಾ (ವಸತಿ ಸಚಿವರು) :

ಅ) ಹೌದು.

ಆ) 1984 ರಲ್ಲಿ ಅರ್ಜಿ ಜೊತೆಗೆ ನೋಂದಣಿ ಶುಲ್ಕವನ್ನು ಸ್ವೀಕರಿಸಲಾಗಿದೆ.

ಇ) ಭೂಸ್ವಾಧೀನಾಧಿಕಾರಿಗಳು ಮಧ್ಯ ಭಾಗಕ್ಕೆ ಜಮೀನನ್ನು ಬಿಟ್ಟು 3 ತುಂಡುಗಳಲ್ಲಿ ಸ್ವಾಧೀನ ಗೊಳಿಸಿದ್ದರಿಂದ ಬಡಾವಣೆ ನಕ್ಷೆ ತಯಾರಿಸಲು ಸಾಧ್ಯವಾಗಿರುವುದಿಲ್ಲ. ಠೇವಣಿ ಹಣಕ್ಕೆ ಬಡ್ಡಿ ಕೊಡುವುದಕ್ಕೆ ಅವಕಾಶವಿರುವುದಿಲ್ಲ.

ಈ) ಭೂಸ್ವಾಧೀನದಲ್ಲಿ ಬಿಟ್ಟು ಹೋಗಿರುವ ಜಮೀನು ಪಡೆದ ತಕ್ಷಣ ಯೋಜನೆಯನ್ನು ಪ್ರಾರಂಭಿಸಲಾಗುವುದು.

ಹೇಮಾವತಿ ನದಿಯಿಂದ ಬೆಂಗಳೂರು ನಗರಕ್ಕೆ ಕುಡಿಯುವ ನೀರು ಸರಬರಾಜು ಮಾಡುವ ಬಗ್ಗೆ

191 - ಶ್ರೀ ಆರ್.ವಿ. ದೇವರಾಜ್ (ಚಾಮರಾಜಪೇಟೆ) : ಮಾನ್ಯ ನಗರಾಭಿವೃದ್ಧಿ ಸಚಿವರು . ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು ನಗರಕ್ಕೆ ಹೇಮಾವತಿ ನದಿಯಿಂದ ನೀರನ್ನು ತರುವ ಬಗ್ಗೆ ಸರ್ಕಾರ ಯೋಜನೆಯನ್ನು ತಯಾರಿಸಿದೆಯೇ?*

ಆ) *ಹಾಗಿದ್ದಲ್ಲಿ ಅದಕ್ಕೆ ತಗಲುವ ಅಂದಾಜು ವೆಚ್ಚವೆಷ್ಟು?*

ಇ) *ಅದರಿಂದ ಎಷ್ಟು ಪ್ರಮಾಣದ ನೀರು ಬೆಂಗಳೂರು ನಗರಕ್ಕೆ ಸಿಗುವುದು?*

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ.